

# ಪರೀಕ್ಷೆ

ಬನ್ನಿ ಬನ್ನಿ ಗೆಳೆಯರೆ
ಶಾರದೆಯ ಪೂಜೆಗೆ
ಪುಸ್ತಕ, ಲೇಖನಿ, ಅಡಿಕಟ್ಟೆ
ಎಲ್ಲ ತನ್ನಿ ಜೊತೆಗೆ

ಸಮಾಜ, ವಿಜ್ಞಾನ, ಕನ್ನಡ
ಕಲಿತೆವು, ವರ್ಷಪೂರ್ತಿ
ಬರೆದು ಓದಿ ತರುವ
ಶಾಲೆಗೆ ದೊಡ್ಡ ಕೀರುತಿ

ನಕಲು ಮಾಡದಿರೋಣ
ಪರೀಕ್ಷೆಯ ದಿನದಂದು
ಗಾಬರಿ ಎಂದೂ ಬೇಡ
ಪ್ರಶ್ನೆ ಪತ್ರಿಕೆ ಕಂಡ ಕ್ಷಣದಲಿ

ಪ್ರಶ್ನೆಗಳ ಓದಲು
ಬೇಡ ಅವಸರ
ಉತ್ತರ ಹೊಳೆಯುವುದು
ತನಗೆ ತಾನೆ ಸರ ಸರ

ಸುಲಭದ ಪ್ರಶ್ನೆಗೆ
ಉತ್ತರ ಮೊದಲಿಗೆ
ಉಳಿದುದೆಲ್ಲ ಬರೆಯುವ
ಯೋಚಿಸಿ ಕೊನೆಗೆ,

ಕಡೆಯ ಗಂಟೆವರೆಗೆ
ಉತ್ತರ ಮತ್ತೆ ಮತ್ತೆ ನೋಡಿ
ಒಳ್ಳೆ ಅಂಕ ಬರುವುದು
ಅದು ಶಾರದೆಯ ಮೋಡಿ.

**- ಶಿವನಾಪುರ ನರಸಿಂಹಮೂರ್ತಿ, ಕೆಂಗೇರಿ**

# ನೈವೇದ್ಯದ ಔಚಿತ್ಯ



ಶ್ರೀ ರಾಮಾಚಾರ್ಯರ ಗುರುಕುಲದಲ್ಲಿ ಅಂದು ಗೋಕುಲಾಷ್ಟಮಿ ಹಬ್ಬ ವಿಜೃಂಭಣೆಯಿಂದ ನಡೆಯಿತು. ಕೃಷ್ಣನ ನೈವೇದ್ಯಕ್ಕೆಂದು ಬಗೆ ಬಗೆಯ ತಿಂಡಿಗಳು, ಭಕ್ಷ್ಯಗಳನ್ನು ಇಟ್ಟು ನೈವೇದ್ಯ ಮಾಡಿದರು. ಆಗ ಭಗವಂತನ ಅಸ್ತಿತ್ವದ ಬಗ್ಗೆ ಅನುಮಾನವಿದ್ದ ಶಿಷ್ಯನೊಬ್ಬನು ಗುರುಗಳ ಹತ್ತಿರ– ಗುರುಗಳೇ, ನೀವು ನೈವೇದ್ಯ ಮಾಡಿದ್ದನ್ನು ಭಗವಂತನು ಖಂಡಿತಾ ಸ್ವೀಕಾರ ಮಾಡುತ್ತಾನೆಯೇ? ಹಾಗೆ ಮಾಡಿದರೆ ಯಾಕೆ ಅವು ಸಂಖ್ಯೆಯಲ್ಲಿ ಅಥವಾ ಗಾತ್ರದಲ್ಲಿ ಕಮ್ಮಿಯಾಗಲಿಲ್ಲ? ಭಗವಂತನು ಇರುವುದು ನಿಜವೇ? ಎಂದೆಲ್ಲಾ ಪ್ರಶ್ನಿಸಿದಾಗ, ಗುರುಗಳು– ಮಕ್ಕಳೇ ಎಲ್ಲಾ.. ಬನ್ನಿ ಇಂದು ನಿಮಗೆ ಉಪನಿಷತ್ತಿನ ಕೆಲವು ಮಂತ್ರಗಳನ್ನು ಹೇಳಿ ಕೊಡ್ತೀನಿ. ನೀವೆಲ್ಲಾ ಅದನ್ನು ಮನಃಪೂರ್ವಕ ಕಂಠಪಾಟ ಮಾಡಿ ನಾಳೆ ನನಗೆ ಒಪ್ಪಿಸಬೇಕು ಎಂದು ಹೇಳಿದರು. ಶಿಷ್ಯರೆಲ್ಲರು ಉತ್ಸಾಹದಿಂದ ಕಲಿತು ನಾಳೆ ಒಪ್ಪಿಸಲಿಕ್ಕೆ ತಯಾರಾದರು.

ಮಾರನೇ ದಿನ ಎಲ್ಲರೂ ಉತ್ಸಾಹದಿಂದ ಗುರುಗಳು ಕೇಳುವುದಕ್ಕೆ ಕಾಯುತ್ತಿದ್ದರು. ಹಿಂದಿನ ದಿನ ನೈವೇದ್ಯ ಸ್ವೀಕಾರದ ಬಗ್ಗೆ ಅನುಮಾನವಿದ್ದ ಶಿಷ್ಯನ ಹತ್ತಿರ ಮಂತ್ರಗಳನ್ನು ಹೇಳುವುದಕ್ಕೆ ಕೇಳಿದರು. ಅವನು ಒಂದೂ ತಪ್ಪಿಲ್ಲದೇ ಹೇಳಿದಾಗ ಸಂತೋಷ ಸೂಚಿಸಿ ಅವನ ಹತ್ತಿರ– ನೀನು ಮಂತ್ರ ಕಲಿತ ಮೇಲೆಯೂ ಅದು ಪುಸ್ತಕದಲ್ಲಿ ಹಾಗೇ ಇದೆ ಎಂದಾಗ ಅವನು ತಬ್ಬಿಬ್ಬಾದ. ಆಗ ಗುರುಗಳು– 'ಮಕ್ಕಳೇ, ಪುಸ್ತಕದಲ್ಲಿರುವ ಮಂತ್ರವು ಸ್ಥೂಲ ಸ್ಥಿತಿಯಲ್ಲಿದೆ. ಅದರಿಂದ ಕಲಿತ ನಿಮ್ಮ ಬುದ್ಧಿಪಟಲದಲ್ಲಿ ಮಂತ್ರಗಳು ಸೂಕ್ಷ್ಮ ಸ್ಥಿತಿಯಲ್ಲಿವೆ. ಆದ್ದರಿಂದ ಸ್ಥೂಲಸ್ಥಿತಿಯಲ್ಲಿರುವ ಮಂತ್ರಗಳು ಹಾಗೇ ಪುಸ್ತಕದಲ್ಲಿ ಉಳಿದಿವೆ. ಹಾಗೆಯೇ ಭಗವಂತನಿಗೆ ಅರ್ಪಿಸಿರುವ ತಟ್ಟೆಯಲ್ಲಿರುವ ನೈವೇದ್ಯಗಳು ಸ್ಥೂಲಸ್ಥಿತಿಯಲ್ಲಿವೆ. ಆದರೆ, ಭಕ್ತಿಯಿಂದ ನೀವು ಭಗವಂತನಿಗೆ ಅರ್ಪಿಸಿದಾಗ ಅವನು ಅದನ್ನು ಸೂಕ್ಷ್ಮಸ್ಥಿತಿಯಲ್ಲಿ ಸ್ವೀಕಾರ ಮಾಡುತ್ತಾನೆ. ಆದರಿಂದಲೇ, ಸ್ಥೂಲ ಸ್ಥಿತಿಯಲ್ಲಿರೋ ನೈವೇದ್ಯವು ಹಾಗೇ ತಟ್ಟೆಯಲ್ಲಿ ಇರುತ್ತವೆ. ಎಲ್ಲಾ ಭಕ್ತರಿಗೆ ಹಂಚಲು ಅನುಕೂಲವಾಗಲೆಂದು' ಎಂದಾಗ ಗುರುಗಳ ಜಾಣ್ಮೆಗೆ ಹಾಗೂ ಕಠಿಣವಾದ ವಿಷಯವನ್ನು ಹೀಗೆ ಸುಲಭ ರೀತಿಯಲ್ಲಿ ಮನದಟ್ಟು ಮಾಡಿಕೊಟ್ಟಿದ್ದಕ್ಕೆ ಎಲ್ಲರೂ ತಲೆಬಾಗಿ ಗುರುಗಳ ಕಾಲಿಗೆ ಭಕ್ತಿಯಿಂದ ನಮಸ್ಕರಿಸಿದರು.

**-ವಿ. ವಿಜಯೇಂದ್ರ ರಾವ್, ಬೆಂಗಳೂರು**